ಶ್ರೀರಂಗಪಟ್ಟಣದಲ್ಲಿ ಹಾಗೂ ಗಾಂಜಾಯ್‌ನಲ್ಲಿ ಬರುವ ವಿದೇಶಿ ಪ್ರವಾಸಿಗರ ಬಗ್ಗೆ

೮೪೪ (೨೪೮) ಶ್ರೀಮತಿ ಮುಕ್ತರುನ್ನೀಸ್ ಬೇಗಂ (ನರಸೀಪುರರಾಜ).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಶ್ರೀರಂಗಪಟ್ಟಣದಲ್ಲಿ ಹಾಗೂ ಗಾಂಜಾಮ್‌ನಲ್ಲಿ ಬರುವ ವಿದೇಶಿ ಪ್ರವಾಸಿಗರಿಗೆ ಅವಶ್ಯಕ ಸೌಲಭ್ಯಗಳನ್ನು ಒದಗಿಸುವುದರಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಆ) ಪ್ರವಾಸಿಗರಿಗೆ ಒದಗಿಸಲಿರುವ ಸೌಲಭ್ಯಗಳು ಯಾವುವು?

ಇ) ಈ ಪ್ರದೇಶಕ್ಕೆ ಭೇಟಿ ನೀಡಿರುವ ಪ್ರವಾಸಿಗರಿಂದ ಬಸೂಲಾಗಿರುವ ಒಟ್ಟು ಆದಾಯ ವೆಷ್ಟು? ೧೯೮೫ನೇ ಇಸವಿಯಿಂದ ಪ್ರತಿ ತಿಂಗಳ ಆದಾಯವನ್ನು ಒದಗಿಸತಕ್ಕದ್ದು?

ಶ್ರೀ ಎಂ. ಪಿ ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಿ ಮಂತ್ರಿಗಳು).—

ಅ) ವಿದೇಶಿ ಪ್ರವಾಸಿಗರು ತಂಗಲು ವಸತಿ, ಉಪಹಾರ ಗೃಹ ಮತ್ತು ಶೌಚಾಲಯಗಳನ್ನು ಪುರಾತತ್ವ ಕಟ್ಟಡಗಳ ಬಳಿ ಒದಗಿಸಲಾಗುವುದು.

ಆ) ೧. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಕಾವೇರಿ ನದಿ ತೀರದ ಬಳಿ ೬ ಕೊತಡಿಗಳುಳ್ಳ ಮೂರು ಕಾಟೇಜುಗಳನ್ನು ಹಾಗೂ ಉಪಹಾರ ಗೃಹಗಳನ್ನು ನಡೆಸುತ್ತಿದೆ.

೨. ರಂಗನಾಥಸ್ವಾಮಿ ದೇವಸ್ಥಾನದ ಬಳಿ ಒಂದು ಶಾಖಾಹಾರಿ ಶೀಘ್ರ ಉಪಹಾರ ಮಂದಿರ, ಸ್ನಾನಗೃಹ ಹಾಗೂ ಶೌಚಾಲಯ ಸೌಲಭ್ಯವು ನಿರ್ಮಾಣ ಹಂತದಲ್ಲಿದೆ.

ಇ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ನಡೆಸಲ್ಪಡುತ್ತಿರುವ ಸೌಲಭ್ಯಗಳಿಂದ ವಸೂಲಾಗಿರುವ ಆದಾಯವು ಈ ಕೆಳಕಂಡಂತೆ ಇರುತ್ತದೆ :

	೧೯೮೪–೮೫	೧೯೮೫–೮೬	೧೯೮೬–೮೭
	ರೂ.	ರೂ.	ರೂ.
(ಅ) ವಸತಿ ಸೌಲಭ್ಯ ನದಿ ತೀರದ ಕುಟೀರಗಳು	೧.೨೯ ಲಕ್ಷ	೧.೪೪ ಲಕ್ಷ (ವಾರ್ಷಿಕ ಆದಾಯ)	೧.೧೯ ಲಕ್ಷ
(ಆ) ಉಪಹಾರ ಗೃಹ	೧.೪೦ ಲಕ್ಷ	೨.೧೮ ಲಕ್ಷ (ವಾರ್ಷಿಕ ಆದಾಯ)	೨.೧೮ ಲಕ್ಷ

ಗುಲ್ಬರ್ಗಾ ನಗರಕ್ಕೆ ಭೀಮಾ ನದಿಯಿಂದ ಕುಡಿಯಲಿಗಾಗಿ ನೀರನ್ನು ಸರಬರಾಜು ಮಾಡುವ ಬಗ್ಗೆ

೮೫೫ (೩೦೦) ಶ್ರೀ ಎಂ. ವೀರಯ್ಯ ಸ್ವಾಮಿ (ಚಿಂಚೋಳಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(೧) ಗುಲ್ಬರ್ಗ ನಗರಕ್ಕೆ ಭೀಮಾ ನದಿಯಿಂದ ಕುಡಿಯುವ ನೀರಿನ ಸರಬರಾಜು ಮಾಡುವ ಯೋಜನೆಯನ್ನು ಸರ್ಕಾರವು ಮಂಜೂರು ಮಾಡಿರುವುದು ನಿಜವೇ?

(೨) ಹಾಗಾದರೆ ಈ ಯೋಜನೆಗೆ ಬೇಕಾಗುವ ಅಗತ್ಯ ಹಣವನ್ನು ಪೂರೈಸಲು ಸರ್ಕಾರವು ಉದ್ದೇಶಪಟ್ಟಿದೆಯೇ?

(೩) ಯೋಜನೆಯ ಕೆಲಸಗಳನ್ನು ಯಾವಾಗ ಪ್ರಾರಂಭಿಸಲಾಗುವುದು ಮತ್ತು ಯೋಜನೆಯನ್ನು ಎಲ್ಲಿಗೆ ರೀತಿಯಲ್ಲಿ ಮುಗಿಸಲು ಬೇಕಾಗುವ ಸಮಯವೆಷ್ಟು?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

(೧) ಹೌದು.

(೨) ಅಂದಾಜು ವೆಚ್ಚದ ರೂ. ೧೨.೮೬ ಕೋಟಿಗಳ ಪೈಕಿ ೫೫೪.೦೦ ಲಕ್ಷ ರೂ.ಗಳನ್ನು ಸರ್ಕಾರವು ಸಾಲವಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ನೀಡುವುದು.

(೩) ಈ ಯೋಜನೆಯ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಟೆಂಡರ್‌ಗಳನ್ನು ಕರೆಯುವ ಕ್ರಮ ಕೈಗೊಳ್ಳಲಾಗಿದೆ. ಈ ಯೋಜನೆಯನ್ನು ೩ ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ಕಾರ್ಯಕ್ಷೇತ್ರದ ಬಗ್ಗೆ.

೮೬ (೩೦೩) ಶ್ರೀ ಎಂ. ವೀರಯ್ಯ ಸ್ವಾಮಿ (ಚಿಂಚೋಳಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯನ್ನು ಲಾಭ ನಷ್ಟ ರಹಿತ ಆಧಾರದ ಮೇಲೆ ಕಾರ್ಯನಿರ್ವಹಿಸುವ ಸಂಸ್ಥೆಯಾಗಿ ಸ್ಥಾಪಿಸಿರುವುದು ನಿಜವೆ?

ಆ) ಈಗ ಜಲಮಂಡಲಿಯು ಕಾರ್ಯನಿರ್ವಹಿಸುತ್ತಿರುವ ನೀರು ಸರಬರಾಜು ಯೋಜನೆಗಳ ಸಂಖ್ಯೆ ಎಷ್ಟು?

ಇ) ಈ ಕಾರ್ಯ ಪ್ರಗತಿಯಲ್ಲಿರುವ ಯೋಜನೆಗಳನ್ನು ಪೂರ್ಣಗೊಳಿಸಲು ಎಷ್ಟು ಹಣ ಬೇಕಾಗುವುದು?

ಈ) ಲಾಭ ನಷ್ಟ ರಹಿತ ಆಧಾರದ ಮೇಲೆ ಎಷ್ಟು ಪಟ್ಟಣಗಳಿಗೆ ಜಲಮಂಡಲಿಯು ನೀರನ್ನು ಸರಬರಾಜು ಮಾಡುತ್ತಿದೆ?

ಉ) ರಾಜ್ಯ ಸರ್ಕಾರದಿಂದ ಮತ್ತು ಕೇಂದ್ರ ಸರ್ಕಾರದಿಂದ ಸಹಾಯ ಧನವಾಗಿ ಮತ್ತು ಸಾಲವಾಗಿ ಜಲಮಂಡಲಿಯು ಪಡೆಯುತ್ತಿರುವ ಹಣದ ಮೊತ್ತ ಎಷ್ಟು?

ಊ) ಪ್ರಸಕ್ತ ಕಾರ್ಯ ಪ್ರಗತಿಯಲ್ಲಿರುವ ಯೋಜನೆಗಳನ್ನು ಪೂರ್ಣಗೊಳಿಸದೆ ಸದ್ಯದ ಮಂಡಲಿಯ ಆರ್ಥಿಕ ಪರಿಸ್ಥಿತಿಯಲ್ಲಿ ಹೊಸ ಯೋಜನಾ ಕಾರ್ಯಗಳನ್ನು ಕೈಗೆತ್ತಿಕೊಳ್ಳುವುದು ಸಾಧ್ಯವೆ?

ಋ) ರಾಜ್ಯ, ಕೇಂದ್ರ ಸರ್ಕಾರಗಳಿಗೆ ಜಿ.ವ ವಿಮಾ ನಿಗಮಕ್ಕೆ ಹುಡ್ಕೋ ಹಾಗೂ ಇತರೆ ಆರ್ಥಿಕ ಸಂಸ್ಥೆಗಳಿಗೆ ಜಲಮಂಡಲಿಯು ನೀಡಬೇಕಾಗಿರುವ ಬಾಕಿಯ ಮೊತ್ತ ಎಷ್ಟು, ಈ ಬಾಕಿಯನ್ನು ಮಂಡಲಿಯು ತೀರಿಸುವ ಸ್ಥಿತಿಯಲ್ಲಿದೆಯೇ, ಇಲ್ಲವಾದ್ದಲ್ಲಿ ಸರ್ಕಾರವು ಮಂಡಲಿಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ೩೯.

ಇ) ೪,೩೭೨.೦೦ ಲಕ್ಷ ರೂ.ಗಳು

ಈ) ೧೧.

ಉ) ರಾಜ್ಯ ಸರ್ಕಾರದಿಂದ ಮಂಡಲಿಗೆ ಈವರೆವಿಗೆ ೬೯೭೨.೮೫ ಲಕ್ಷ ರೂ.ಗಳನ್ನು ಸಹಾಯ ಧನವಾಗಿ ಹಾಗೂ ಸಾಲವಾಗಿ ನೀಡಲಾಗಿದೆ. ಕೇಂದ್ರ ಸರ್ಕಾರದಿಂದ ಯಾವುದೇ ಹಣವನ್ನು ಮಂಡಲಿಗೆ ನೀಡಲಾಗಿರುವುದಿಲ್ಲ. (ಅಭಾವ ಪರಿಹಾರ ಕಾಮಗಾರಿಗಳಿಗೆ ನೀಡುವ ಹಣದ ಹೊರತಾಗಿ)

ಊ) ಇಲ್ಲ.